**ಕನ್ನಡ ವಿಶ್ವವಿದ್ಯಾಲಯ, ಹಂಪಿ**
**ವಿದ್ಯಾರಣ್ಯ-೫೮೩ ೨೭೬**

## ಸೆಪ್ಟಂಬರ್ ೨೦ ೨೦೨೧ರ ಸೋಮವಾರದಂದು ನಡೆದ ಕಾರ್ಯಕಾರಿ ಸಮಿತಿ ೨೦೮ನೇ ಸಭೆಯ ನಡಾವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಸ.ಚಿ.ರಮೇಶ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಪ್ರೊ. ಹೆಚ್.ಎಸ್. ರಘುನಾಥ, ಶಿವಮೊಗ್ಗ | : ಸದಸ್ಯರು |
| ೦೩. ಪ್ರೊ. ಹೆಚ್.ಎಂ. ಚನ್ನಪ್ಪಗೋಳ, ಬೆಳಗಾವಿ | : ಸದಸ್ಯರು |
| ೦೪. ಪ್ರೊ. ಜಿ.ಸಿ. ರಾಜಣ್ಣ, ಮೈಸೂರು | : ಸದಸ್ಯರು |
| ೦೫. ಶ್ರೀಮತಿ ನಯನಾ ಎಸ್., ಬೆಂಗಳೂರು | : ಸದಸ್ಯರು |
| ೦೬. ಶ್ರೀ ಪ್ರಶಾಂತ್ ಭೀಮಯ್ಯ, ಮಡಿಕೇರಿ | : ಸದಸ್ಯರು |
| ೦೭. ಶ್ರೀ ಜೈಭೀಮ್ ಆರ್.ಕಟ್ಟಿ, ಕಲಬುರಗಿ | : ಸದಸ್ಯರು |
| ೦೮. ಡಾ. ಓ. ಓಬಯ್ಯ | : ಸದಸ್ಯರು |
| ೦೯. ಶ್ರೀ ಸಮಿಉಲ್ಲಾ ಖಾನ್, ಬೆಂಗಳೂರು | : ಸದಸ್ಯರು |
| ೧೦. ಡಾ. ವೀರೇಶ ಬಡಿಗೇರ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೧೧. ಡಾ. ಸಿ.ಆರ್. ಗೋವಿಂದರಾಜು, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೨. ಡಾ. ಕೆ.ರವೀಂದ್ರನಾಥ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೧೩. ಡಾ. ಮಾಧವ ಪೆರಾಜೆ, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೪. ಡಾ. ರಮೇಶ ನಾಯಕ, ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |
| ೧೫. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೫. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಸಭೆಗೆ ಸ್ವಾಗತಿಸಿದರು. ಇತ್ತೀಚೆಗೆ ನಿಧನರಾದ ಕನ್ನಡ ವಿಶ್ವವಿದ್ಯಾಲಯದ ಸಿಬ್ಬಂದಿಗಳಾದ ಡಾ. ಕಲವೀರ ಮನ್ವಾಚಾರ್, ಶ್ರೀ ಗಾದಿಲಿಂಗ, ಶ್ರೀ ಎಫ್.ಡಿ.ನದಾಫ್ ಹಾಗೂ ಶ್ರೀ ಶ್ರೀಕಾಂತ ಅವರುಗಳ ಆತ್ಮಕ್ಕೆ ಶಾಂತಿ ಕೋರಿ ಸಭೆ ಸಂತಾಪ ಸೂಚಿಸಿತು.

**ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.**

**ವಿಷಯ** : ದಿನಾಂಕ ೦೮.೦೪.೨೦೨೧ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೭ನೇ (ವಿಶೇಷ) ಸಭೆಯ ನಡವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು.(ಅನುಬಂಧ-೦೧)

**ನಿರ್ಣಯ** : ದಿನಾಂಕ ೦೮.೦೪.೨೦೨೧ರಂದು ನಡೆದ ಕಾರ್ಯಕಾರಿ ಸಮಿತಿ ೨೦೭ನೇ (ವಿಶೇಷ) ಸಭೆಯ ನಡವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಸಭೆಯು ಅನುಮೋದನೆ ನೀಡಿತು.

**ವಿಷಯ** : ದಿನಾಂಕ ೦೮.೦೪.೨೦೨೧ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೭ನೇ (ವಿಶೇಷ) ಸಭೆಯ ನಡವಳಿಗಳ ಅನುಪಾಲನಾ ವರದಿಗಳಿಗೆ ಅನುಮೋದನೆ ನೀಡುವ ಕುರಿತು.(ಅನುಬಂಧ-೦೨)

**ನಿರ್ಣಯ** : ದಿನಾಂಕ ೦೮.೦೪.೨೦೨೧ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೭ನೇ (ವಿಶೇಷ) ಸಭೆಯ ನಡವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ, ಇನ್ನುಮುಂದೆ ಕಾರ್ಯಕಾರಿ ಸಮಿತಿ ಆಯೋಜಿಸಿದಾಗ ಕಾರ್ಯಸೂಚಿಗೆ ಸಂಬಂಧಿಸಿದ ದಾಖಲೆಗಳನ್ನು ಸಾಫ್ಟ್ ಕಾಪಿ ಮೂಲಕ ಸಾಕಷ್ಟು ಮುಂಚಿತವಾಗಿ ಎಲ್ಲಾ ಸದಸ್ಯರಿಗೆ ಸಲ್ಲಿಸುವಂತೆ ಸೂಚಿಸಿ ಅನುಮೋದನೆ ನೀಡಿತು.

೨೦೮.೦೧ ೨೦೭ನೇ ಕಾರ್ಯಕಾರಿ ಸಮಿತಿ ನಿರ್ಣಯದಂತೆ ದಿನಾಂಕ ೦೩.೦೪.೨೦೨೧ರಂದು ಡಾ. ಚಲುವರಾಜು, ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ, ಇವರು ಸಬಾಟಿಕಲ್ ರಜೆ ಕೋರಿ ಸಲ್ಲಿಸಿರುವ ಮನವಿಯನ್ನು ಮರುಮಂಡಿಸುವ ಕುರಿತು.

ಟಿಪ್ಪಣಿ : ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಚಲುವರಾಜು ಇವರು **'ಕರ್ನಾಟಕ ಬುಡಕಟ್ಟುಗಳ ಪ್ರದರ್ಶನ ಕಲೆಗಳು'** ಎಂಬ ವಿಷಯಕ್ಕೆ ಸಂಬಂಧಿಸಿದ ಯೋಜನೆಯನ್ನು ಕೈಗೊಳ್ಳಲು ಒಂದು ವರ್ಷದ ಅವಧಿಯ ಸಬಾಟಿಕಲ್ ರಜೆಗೆ ದಿನಾಂಕ ೦೩.೦೪.೨೦೨೧ರಂದು ಮನವಿಯನ್ನು ಸಲ್ಲಿಸಿದ್ದಾರೆ. ದಿನಾಂಕ ೧೨.೧೦.೨೦೨೦ರ ಬುಡಕಟ್ಟು ಅಧ್ಯಯನ ವಿಭಾಗದ ಸಮಿತಿ ಸಭೆ ಅನುಮೋದನೆ ಮೇರೆಗೆ ಹಾಗೂ ಯುಜಿಸಿ ನಿಯಮಾವಳಿ ೨೦೧೦ರ ಅನ್ವಯ (ದಿ ಗೆಜೆಟಿಯರ್ ಆಫ್ ಇಂಡಿಯಾ ಸೆಪ್ಟಂಬರ್ ೧೮, ೨೦೧೦–ಪಾರ್ಟ್–೩ ಸೆಕ್ಷನ್–೪ ಕಂಡಿಕೆ ೮.೩) ಹಾಗೂ ವಿಶ್ವವಿದ್ಯಾಲಯದ ನಿಯಮಾವಳಿಗಳನ್ವಯ ಸಬಾಟಿಕಲ್‌ರಜೆಯನ್ನು ಮಂಜೂರು ಮಾಡಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ :** ಸದರಿ ವಿಷಯವನ್ನು ಪರಿಶೀಲಿಸಿದ ಸಭೆಯು ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆಯಾಗದಂತೆ ಮತ್ತು ನಿಗದಿತ ಅವಧಿಯೊಳಗೆ ಯೋಜನೆಯನ್ನು ಪೂರೈಸಿ ಸಲ್ಲಿಸುವ ಷರತ್ತಿಗೊಳಪಟ್ಟು ಸದರಿಯವರಿಗೆ ಒಂದು ವರ್ಷದ ಸಬಾಟಿಕಲ್ ರಜೆಯನ್ನು ಮಂಜೂರು ಮಾಡಲು ಅನುಮೋದನೆ ನೀಡಿತು.

೨೦೮.೦೨ ದಿನಾಂಕ ೦೩.೦೪.೨೦೨೧ರಂದು ಡಾ. ಮಂಜುನಾಥ ಬೇವಿನಕಟ್ಟಿ, ಪ್ರಾಧ್ಯಾಪಕರು, ಜಾನಪದ ಅಧ್ಯಯನ ವಿಭಾಗ, ಇವರು ಸಬಾಟಿಕಲ್ ರಜೆ ಕೋರಿ ಸಲ್ಲಿಸಿರುವ ಮನವಿ ಕುರಿತು.

ಟಿಪ್ಪಣಿ : ಜಾನಪದ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಮಂಜುನಾಥ ಬೇವಿನಕಟ್ಟಿ ಇವರು **'ಹಂಪಿ ಪರಿಸರದಲ್ಲಿ ಹನುಮಂತನ ಶ್ರದ್ಧಾ ಪರಂಪರೆ'** ಎಂಬ ಅಧ್ಯಯನ ಯೋಜನೆಯನ್ನು ಕೈಗೊಳ್ಳಲು ಒಂದು ವರ್ಷದ ಅವಧಿಯ ಸಬಾಟಿಕಲ್ ರಜೆಗೆ ದಿನಾಂಕ ೦೩.೦೪.೨೦೨೧ರಂದು ಮನವಿಯನ್ನು ಸಲ್ಲಿಸಿದ್ದಾರೆ. ದಿನಾಂಕ ೩೦.೦೩.೨೦೨೧ರ ಜಾನಪದ ಅಧ್ಯಯನ ವಿಭಾಗದ ಅಧ್ಯಯನ ಮಂಡಳಿ ಸಭೆ ಅನುಮೋದನೆ ಮೇರೆಗೆ ಹಾಗೂ ಯುಜಿಸಿ ನಿಯಮಾವಳಿ ೨೦೧೦ರ ಅನ್ವಯ (ದಿ ಗೆಜೆಟಿಯರ್ ಆಫ್ ಇಂಡಿಯಾ ಸೆಪ್ಟಂಬರ್ ೧೮, ೨೦೧೦–ಪಾರ್ಟ್–೩ ಸೆಕ್ಷನ್–೪ ಕಂಡಿಕೆ ೮.೩) ಹಾಗೂ ವಿಶ್ವವಿದ್ಯಾಲಯದ ನಿಯಮಾವಳಿಗಳನ್ವಯ ಸಬಾಟಿಕಲ್ ರಜೆಯನ್ನು ಮಂಜೂರು ಮಾಡಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ :** ಸದರಿ ವಿಷಯವನ್ನು ಪರಿಶೀಲಿಸಿದ ಸಭೆಯು ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆಯಾಗದಂತೆ ಮತ್ತು ಸಿಗದಿತ ಅವಧಿಯೊಳಗ ಯೋಜನಯನ್ನು ಪೂರೈಸಿ ಸಲ್ಲಿಸುವ ಷರತ್ತಿಗೊಳಪಟ್ಟು ಸದರಿಯವರಿಗ ಒಂದು ವರ್ಷದ ಸಬಾಟಿಕಲ್ ರಜೆಯನ್ನು ಮಂಜೂರು ಮಾಡಲು ಅನುಮೋದನೆ ನೀಡಿತು.

೨೦೮.೦೩ ಜೂನ್ ೧೭, ೨೦೨೧ರಂದು ನಡೆದ ಡೀನ್ ಸಮಿತಿ ಸಭೆ ನಡವಳಿಗಳಿಗೆ ಅನುಮೋದನೆ ನೀಡುವ ಕುರಿತು.

ಟಿಪ್ಪಣಿ : ಶೈಕ್ಷಣಿಕ ಹಾಗೂ ಆಡಳಿತ ವಿಷಯಗಳಿಗೆ ಸಂಬಂಧಪಟ್ಟಂತೆ ದಿನಾಂಕ ೧೭.೦೬.೨೦೨೧ರಂದು ನಡೆದ ಡೀನ್ ಸಮಿತಿ ಸಭೆ ನಡವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ :** ಸದರಿ ನಡವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೮.೦೪ ಜುಲೈ ೧೨, ೨೦೨೧ರಂದು ನಡೆದ ಡೀನ್ ಸಮಿತಿ ಸಭೆ ನಡವಳಿಗಳಿಗೆ ಅನುಮೋದನೆ ನೀಡುವ ಕುರಿತು.

ಟಿಪ್ಪಣಿ : ಶೈಕ್ಷಣಿಕ ಹಾಗೂ ಆಡಳಿತ ವಿಷಯಗಳಿಗೆ ಸಂಬಂಧಪಟ್ಟಂತೆ ದಿನಾಂಕ ೧೨.೦೭.೨೦೨೧ರಂದು ನಡೆದ ಡೀನ್ ಸಮಿತಿ ಸಭೆ ನಡವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ :** ಸದರಿ ನಡವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೮.೦೫ ಜುಲೈ ೨೩, ೨೦೨೧ರಂದು ನಡೆದ ಡೀನ್ ಸಮಿತಿ ಸಭೆ ನಡವಳಿಗಳಿಗೆ ಅನುಮೋದನೆ ನೀಡುವ ಕುರಿತು.

ಟಿಪ್ಪಣಿ : ಶೈಕ್ಷಣಿಕ ಹಾಗೂ ಆಡಳಿತ ವಿಷಯಗಳಿಗೆ ಸಂಬಂಧಪಟ್ಟಂತೆ ದಿನಾಂಕ ೨೩.೦೭.೨೦೨೧ರಂದು ನಡೆದ ಡೀನ್ ಸಮಿತಿ ಸಭೆ ನಡವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ :** ಸದರಿ ನಡವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೮.೦೬ ಆಗಸ್ಟ್ ೦೪, ೨೦೨೧ರಂದು ನಡೆದ ಡೀನ್ ಸಮಿತಿ ಸಭೆ ನಡವಳಿಗಳಿಗೆ ಅನುಮೋದನೆ ನೀಡುವ ಕುರಿತು.

ಟಿಪ್ಪಣಿ : ಶೈಕ್ಷಣಿಕ ಹಾಗೂ ಆಡಳಿತ ವಿಷಯಗಳಿಗೆ ಸಂಬಂಧಪಟ್ಟಂತೆ ದಿನಾಂಕ ೦೪.೦೮.೨೦೨೧ರಂದು ನಡೆದ ಡೀನ್ ಸಮಿತಿ ಸಭೆ ನಡವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ :** ಸದರಿ ನಡವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೮.೦೭ ಶ್ರೀ ಕೆ.ಎಂ. ಕುಬೇರಪ್ಪ, ಕಿರಿಯ ಅಭಿಯಂತರರು ಇವರ ಪ್ರತಿನಿಯೋಜನೆಯನ್ನು ಮುಂದುವರೆಸುವ ಕುರಿತು.

ಟಿಪ್ಪಣಿ : ಆಯುಕ್ತರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇವರು ದಿನಾಂಕ ೧೨.೦೭.೨೦೨೧ರ ಪತ್ರದ ಮೂಲಕ ಶ್ರೀ ಕೆ.ಎಂ. ಕುಬೇರಪ್ಪ, ಕಿರಿಯ ಅಭಿಯಂತರರು ಇವರ ಪ್ರತಿನಿಯೋಜನೆ ಅವಧಿಯು ದಿನಾಂಕ ೧೭.೦೬.೨೦೨೧ರಂದು ಪೂರ್ಣಗೊಂಡಿರುವುದರಿಂದ ಇವರ ಸೇವೆಯು ಇಲಾಖೆಗೆ ಅವಶ್ಯವಿರುವ ಕಾರಣ ಮತ್ತೆರಡು ವರ್ಷಗಳ ಅವಧಿಗೆ ಮುಂದುವರೆಸಿಕೊಡುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ : ಸದರಿ ಇಲಾಖೆಯ ಮನವಿಯನ್ನು ಸಭೆಯು ಪರಿಶೀಲಿಸಿ, ದಿನಾಂಕ.೧೮.೦೬.೨೦೨೧ರಿಂದ ಪೂರ್ವಾನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಪ್ರತಿನಿಯೋಜನೆಯನ್ನು ಮುಂದುವರಸಲು ಅನುಮೋದನೆ ನೀಡಿತು.

೨೦೮.೦೮ ಭಾರತದ ಅನುಚ್ಛೇದ ೩೭೧(ಜೆ)ರನ್ವಯ ಈಗಾಗಲೇ ನೇಮಕವಾದ ೯ ಬೋಧಕ ಹುದ್ದೆಗಳನ್ನು ನಿರ್ಬಂಧಿಸುವ ಅನುಶಾಸನಕ್ಕೆ ಅನುಮೋದನೆ ನೀಡುವ ಕುರಿತು.

ಟಿಪ್ಪಣಿ : ಭಾರತದ ಅನುಚ್ಛೇದ ೩೭೧(ಜೆ)ರನ್ವಯ ಹೈದ್ರಾಬಾದ್ ಕರ್ನಾಟಕ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿಟ್ಟ ಬೋಧಕ ಹುದ್ದೆಗಳಿಗೆ ನೇಮಕಾತಿ ಆಗಿದ್ದು, ಬೋಧಕ ಹುದ್ದೆಗಳನ್ನು ನಿರ್ಬಂಧಿಸುವ ಅನುಶಾಸನವನ್ನು ಸರ್ಕಾರಕ್ಕೆ ಈ ಹಿಂದೆ ಸಲ್ಲಿಸಲಾಗಿತ್ತು. ಸರ್ಕಾರದ ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ) ದಿನಾಂಕ ೨೩.೦೭.೨೦೨೧ರ ಪತ್ರದ ನಿರ್ದೇಶನದಂತೆ ಸೂಕ್ತ ಪ್ರಾಧಿಕಾರಗಳ ಅನುಮೋದನೆ ಪಡೆದು ಪ್ರಸ್ತಾವನೆಯನ್ನು ಮರು ಸಲ್ಲಿಸಲು ಸೂಚಿಸಿದ ಹಿನ್ನೆಲೆಯಲ್ಲಿ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ಅಂಶಗಳನ್ನು ಸಭೆಯು ಪರಿಶೀಲಿಸಿ, ೨೦೧೭–೧೮ನೇ ಸಾಲಿನ ನಿಯಮಾವಳಿಯನ್ವಯ ಹಾಗೂ ಅಂದಿನ ಕಾರ್ಯಕಾರಿ ಸಮಿತಿ ನಿರ್ಣಯದಂತೆ ಕ್ರಮಹಿಸಲಾಗಿರುವ ಬಗ್ಗೆ ಶಿಕ್ಷಣ ಇಲಾಖೆಗೆ ಪತ್ರ ಬರೆಯುವಂತೆ ತೀರ್ಮಾನಿಸಲಾಯಿತು.

೨೦೮.೦೯ ದಿವಂಗತ ಗಾದಿಲಿಂಗ ಇವರ ಅವಲಂಬಿತ ಕುಟುಂಬ ಸದಸ್ಯರನ್ನು ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಕುರಿತು.

ಟಿಪ್ಪಣಿ : ದಿವಂಗತ ಗಾದಿಲಿಂಗ ಇವರ ಅವಲಂಬಿತ ಕುಟುಂಬದ ಸದಸ್ಯರು ಅನುಕಂಪದ ಆಧಾರಿತ ನೇಮಕಾತಿ ಕೋರಿ ದಿನಾಂಕ ೨೩.೦೭.೨೦೨೧ರಂದು ಸಲ್ಲಿಸಿರುವ ಮನವಿಯ ಹಿನ್ನೆಲೆಯಲ್ಲಿ ದಿವಂಗತರ ಮಗಳಾದ ಕು.ಜಿ.ಸುಧಾ ಅವರನ್ನು ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಪಕ್ರಿಯೆಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯ ಕುರಿತು ಸಭೆಯು ಪರಿಶೀಲಿಸಿ, ದಿವಂಗತ ಗಾದಿಲಿಂಗ ಇವರ ಅವಲಂಬಿತ ಕುಟುಂಬದ ಸದಸ್ಯರಾದ ದಿವಂಗತರ ಮಗಳು ಕು.ಜಿ.ಸುಧಾ ಅವರನ್ನು ನಿಯಮಾನುಸಾರ ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆಗೆ ಅನುಮೋದನೆ ನೀಡಿತು.

೨೦೮.೧೦ ದಿವಂಗತ ಎಫ್.ಡಿ.ನದಾಫ್, ಇವರ ಅವಲಂಬಿತ ಕುಟುಂಬ ಸದಸ್ಯರನ್ನು ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಕುರಿತು.

ಟಿಪ್ಪಣಿ : ದಿವಂಗತ ಎಫ್.ಡಿ.ನದಾಫ್ ಇವರ ಅವಲಂಬಿತ ಕುಟುಂಬ ಸದಸ್ಯರು ಅನುಕಂಪದ ಆಧಾರಿತ ನೇಮಕಾತಿ ಕೋರಿ ದಿನಾಂಕ ೨೫.೦೮.೨೦೨೧ರಂದು ಸಲ್ಲಿಸಿರುವ ಮನವಿಯ ಹಿನ್ನೆಲೆಯಲ್ಲಿ ದಿವಂಗತರ ಮಗನಾದ ಶ್ರೀ ಶಬ್ಬಿರ್ ಅಹಮ್ಮದ್ ಎಫ್. ನದಾಫ್ ಅವರನ್ನು ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯ ಕುರಿತು ಸಭೆಯು ಪರಿಶೀಲಿಸಿ, ದಿವಂಗತ ಎಫ್.ಡಿ.ನದಾಫ್ ಇವರ ಅವಲಂಬಿತ ಕುಟುಂಬದ ಸದಸ್ಯರಾದ ದಿವಂಗತರ ಮಗ ಶ್ರೀ ಶಬ್ಬಿರ್ ಅಹಮ್ಮದ್ ಎಫ್. ನದಾಫ್ ಅವರನ್ನು ನಿಯಮಾನುಸಾರ ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆಗೆ ಅನುಮೋದನೆ ನೀಡಿತು.

೨೦೮.೧೧ ಪರಿಷ್ಕರಿಸಿದ ಕನ್ನಡ ವಿಶ್ವವಿದ್ಯಾಲಯದ 'ಸಂಶೋಧನಾ ನೀತಿ'ಗೆ ಅನುಮೋದನೆ ನೀಡುವ ಕುರಿತು.

ಟಿಪ್ಪಣಿ : ೨೦೧೮ರಲ್ಲಿ ಪ್ರಕಟಿಸಿದ ಕನ್ನಡ ವಿಶ್ವವಿದ್ಯಾಲಯದ 'ಸಂಶೋಧನಾ ನೀತಿ' (Research Policy)ಯನ್ನು ಪರಿಷ್ಕರಿಸಿ ಕನ್ನಡ ಮತ್ತು ಇಂಗ್ಲೀಷ್‌ನ ಆವೃತ್ತಿಗಳನ್ನು ಸಿದ್ಧಪಡಿಸಲಾಗಿದೆ. ಸದರಿ 'ಸಂಶೋಧನಾ ನೀತಿಯನ್ನು ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ : ಪರಿಷ್ಕರಿಸಿ ಸಿದ್ಧಪಡಿಸಲಾದ ಸಂಶೋಧನಾ ನೀತಿ'ಯನ್ನು ಡಾ.ಮಾಧವ ಪೆರಾಜೆ, ಡೀನ್ ವಿಜ್ಞಾನಗಳ ನಿಕಾಯ ಇವರು ಸಭೆಗೆ ಮಂಡಿಸಿದರು. ನಂತರ ಆ ಕುರಿತು ಚರ್ಚಿಸಿ ಎನ್‌ಇಪಿ ನಿಯಮಗಳನ್ನೊಳಗೊಂಡಂತೆ ವಿಸ್ತೃತ ವಿವರಗಳೊಂದಿಗೆ ಪರಿಷ್ಕರಿಸಿದ ಸಂಶೋಧನಾ ನೀತಿ'ಯನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲು ಸಭೆ ಅನುಮೋದನೆ ನೀಡಿತು.

೨೦೮.೧೨ ದಿನಾಂಕ ೧೬.೦೭.೨೦೨೧ರ ಹಣಕಾಸು ಸಲಹಾ ಸಮಿತಿ ಸಭೆ ನಡೆವಳಿಗಳಿಗೆ ಅನುಮೋದನೆ ನೀಡುವ ಕುರಿತು.

ಟಿಪ್ಪಣಿ : ೨೦೨೦-೨೧ನೇ ಸಾಲಿನ ಎರಡನೇ ತ್ರೈಮಾಸಿಕ ಅವಧಿಗೆ ಸಂಬಂಧಿಸಿದಂತೆ ದಿನಾಂಕ ೧೬.೦೭.೨೦೨೧ರಂದು ನಡೆದ ಹಣಕಾಸು ಸಲಹಾ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ : ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೮.೧೩ ದಿನಾಂಕ ೦೩.೦೯.೨೦೨೧ರ ಖರೀದಿ ಸಮಿತಿ ಸಭೆ ನಡೆವಳಿಗಳಿಗೆ ಅನುಮೋದನೆ ನೀಡುವ ಕುರಿತು.

ಟಿಪ್ಪಣಿ : ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಬಳಕೆಗಾಗಿ ನಿಯಮಾನುಸಾರ ಅಗತ್ಯ ಸಾಮಗ್ರಿಗಳನ್ನು ಖರೀದಿಸಲಾದ ವಿಷಯಗಳಿಗೆ ಸಂಬಂಧಪಟ್ಟಂತೆ ದಿನಾಂಕ ೦೩.೦೯.೨೦೨೧ರಂದು ನಡೆದ ಖರೀದಿ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ : ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಸಾಮಗ್ರಿಗಳ ಬೇಡಿಕೆ, ಸ್ವೀಕೃತಿ ಮತ್ತು ಪ್ರಮಾಣಗಳಿಗೆ ಸಂಬಂಧಿಸಿದ ಅಗತ್ಯ ವಿವರಗಳೊಂದಿಗೆ ಮುಂದಿನ ಸಭೆಯಲ್ಲಿ ಮಂಡಿಸಲು ನಿರ್ಣಯಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೨೦೮.೧೪ ಶ್ರೀಮತಿ ನಯನಾ ಎಸ್., ಕಾರ್ಯಕಾರಿ ಸಮಿತಿ ಸದಸ್ಯರು ಇವರು ದಿನಾಂಕ ೦೫.೦೭.೨೦೨೧ರಂದು ಸಲ್ಲಿಸಿರುವ ಮನವಿ ಪತ್ರ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರಗಳ ಮುಖ್ಯಸ್ಥರ ನಿಯೋಜನೆ ಸಂಬಂಧ ಶ್ರೀಮತಿ ನಯನಾ ಎಸ್., ಕಾರ್ಯಕಾರಿ ಸಮಿತಿ ಸದಸ್ಯರು ದಿನಾಂಕ ೦೫.೦೭.೨೦೨೧ರಂದು ಪತ್ರವನ್ನು ಸಲ್ಲಿಸಿದ್ದು, ಈ ಕುರಿತಂತೆ ಕಾರ್ಯಕಾರಿ ಸಮಿತಿ ನಿರ್ದೇಶನ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ದೇವದುರ್ಗ ವಿಸ್ತರಣಾ ಕೇಂದ್ರವನ್ನು ಹೊರತುಪಡಿಸಿ ಉಳಿದ ವಿಸ್ತರಣಾ ಕೇಂದ್ರಗಳ ಮುಖ್ಯಸ್ಥರುಗಳ ಪ್ರತಿನಿಯೋಜನೆಯ ಅವಧಿಯನ್ನು ಮೂರು ವರ್ಷಗಳಿಗೆ ನಿಗದಿಪಡಿಸುವಂತೆಯೂ, ಈಗಾಗಲೇ ಮೂರು ವರ್ಷಗಳ ಅವಧಿಯನ್ನು ಪೂರ್ಣಗೊಳಿಸಿರುವ ಮುಖ್ಯಸ್ಥರುಗಳನ್ನು ಬದಲಾಯಿಸುವಂತೆಯೂ ತೀರ್ಮಾನಿಸಿತು.

೨೦೮.೧೫ ಬೋಧಕ ಹುದ್ದೆಗಳ ನೇಮಕಾತಿ ಮಂಡಳಿ ರಚಿಸಲು ಅವಶ್ಯವಿರುವ ವಿಷಯ ತಜ್ಞರ ಪಟ್ಟಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿ.

ಟಿಪಣಿ : ಬೋದಕ ಹುದ್ದೆಗಳ ನೇಮಕಾತಿಗೆ ಸರಕಾರದ ಅನುಮೋದನೆ ನೀಡಿರುವ ಮೇರೆಗೆ ಯುಜಿಸಿ ಮತ್ತು ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮ/ಪರಿನಿಯಮಗಳ ರೀತ್ಯಾ ೩೭೧(ಜೆ) ಕಲ್ಯಾಣ ಕರ್ನಾಟಕದ ಕೈಬಿಟ್ಟುಹೋದ ಮೀಸಲಾತಿಗೆ ಅನುಗುಣವಾಗಿ ಹುದ್ದೆಗಳ ಭರ್ತಿಗೆ ದಿನಾಂಕ ೦೩.೦೯.೨೦೨೧ರಂದು ಅಧಿಸೂಚನೆ ಹೊರಡಿಸಲಾಗಿದೆ. ಯುಜಿಸಿ ರೆಗ್ಯುಲೇಷನ್ ೨೦೧೮ರಲ್ಲಿ ಉಪಬಂಧಿಸಿದಂತೆ ಬೋಧಕ ಹುದ್ದೆಗಳ ನೇಮಕಾತಿ ಮಂಡಳಿ ರಚಿಸಲು ಅವಶ್ಯವಿರುವ ವಿಷಯ ತಜ್ಞರ ಪಟ್ಟಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಂಡಿತು.

೧. ಅಧಿಸೂಚಿಸಿರುವ ಮೀಸಲಾತಿಯನ್ವಯ ಬೋಧಕಹುದ್ದೆಗಳ ಭರ್ತಿಗೆ ಕ್ರಮವಹಿಸಲು ಮತ್ತು ಕನ್ನಡ ಸಾಹಿತ್ಯ, ಮಹಿಳಾ ಅಧ್ಯಯನ ವಿಭಾಗಗಳನ್ನು ಪ್ರತ್ಯೇಕಿಸಿ ತಿದ್ದುಪಡಿ ಅಧಿಸೂಚನೆ ಹೊರಡಿಸಲು ಅನುಮೋದನೆ ನೀಡಿತು.

೨. ವಿಷಯ ತಜ್ಞರ ಪಟ್ಟಿಯಲ್ಲಿ ಮೀಸಲಾತಿಗೆ ಅಗತ್ಯವಾದ ವಿಷಯ ತಜ್ಞರ ಕೊರತೆ ಉಂಟಾದಲ್ಲಿ ಇದೇ ಪಟ್ಟಿಯಲ್ಲಿನ ಬೇರೊಂದು ವಿಭಾಗದ ತಜ್ಞರನ್ನು ಅಥವಾ ಹೊಸ ಹೆಚ್ಚುವರಿ ತಜ್ಞರೊಬ್ಬರನ್ನು ಯುಜಿಸಿ ನಿಯಮಾನುಸಾರ ಮಾನ್ಯ ಕುಲಪತಿಯವರು ಸೇರ್ಪಡೆಗೊಳಿಸಬಹುದೆಂದೂ ಮತ್ತು ಅಗತ್ಯ ಪರಿಷ್ಕರಣೆಗಳನ್ನು ಮಾಡಿಕೊಳ್ಳಬಹುದೆಂದೂ ತೀರ್ಮಾನಿಸಲಾಯಿತು.

೨೦೮.೧೬ ದಿನಾಂಕ ೧೭.೦೮.೨೦೨೧ರಂದು ನಡೆದ ದೂರಶಿಕ್ಷಣ ನಿರ್ದೇಶನಾಲಯದ ಉನ್ನತ ಸಲಹಾ ಮಂಡಳಿ ೨೦ನೇ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ನೀಡುವ ಕುರಿತು.

ಟಿಪ್ಪಣಿ : ದೂರಶಿಕ್ಷಣ ನಿರ್ದೇಶನಾಲಯವು ಶೈಕ್ಷಣಿಕ ವಿಷಯಗಳಿಗೆ ಸಂಬಂಧಪಟ್ಟಂತೆ ದಿನಾಂಕ ೧೭.೦೮.೨೦೨೧ರಂದು ನಡೆದ ಉನ್ನತ ಸಲಹಾ ಮಂಡಳಿ ೨೦ನೇ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ : ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೮.೧೭ ದಿನಾಂಕ ೦೩.೦೯.೨೦೨೧ರಂದು ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಘಟಕದ ಸಲಹಾ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ನೀಡುವ ಕುರಿತು.

ಟಿಪ್ಪಣಿ : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಘಟಕವು ಶೈಕ್ಷಣಿಕ ಹಾಗೂ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ದಿನಾಂಕ ೦೩.೦೯.೨೦೨೧ರಂದು ನಡೆಸಿದ ಸಲಹಾ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ : ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೮.೧೮ ದಿನಾಂಕ ೧೫.೦೯.೨೦೨೧ರಂದು ನಡೆದ ಕುವೆಂಪು ಸಮಗ್ರ ಸಾಹಿತ್ಯ ಸಂಪುಟಗಳು–ಸತ್ಯಶೋಧನಾ ಸಮಿತಿಯು ಸಲ್ಲಿಸಿದ ಅಂತಿಮ ವರದಿ ಕುರಿತು.

ಟಿಪ್ಪಣಿ : ರಾಷ್ಟ್ರಕವಿ ಕುವೆಂಪು ಸಮಗ್ರ ಸಾಹಿತ್ಯ ಸರಣಿ: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ) ಕುಪ್ಪಳಿ ಇವರ ಆಕ್ಷೇಪಣೆ/ತಕರಾರುಗಳ ಕುರಿತು ದಿನಾಂಕ ೧೫.೦೯.೨೦೨೧ರಂದು ಸಲ್ಲಿಸಿದ ಸತ್ಯಶೋಧನಾ ಸಮಿತಿಯ ಅಂತಿಮ ವರದಿಯನ್ನು ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ : ಸದರಿ ಅಂತಿಮ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆಯನ್ನು ನೀಡಿತು. ಹಾಗೂ ಸೂಕ್ತ ನಿರ್ಣಯವನ್ನು ಕೈಗೊಂಡ ಅಧ್ಯಕ್ಷರು ಎಲ್ಲಾ ಸದಸ್ಯರನ್ನು ಸಮಿತಿಯು ಅಭಿನಂದಿಸಿತು.

೨೦೮.೧೯ ದಿನಾಂಕ ೦೭.೦೮.೨೦೨೧ರಂದು ಸಹ ಪ್ರಾಧ್ಯಾಪಕರ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆ(ಹಂತ ೧೩ಎ ರಿಂದ ೧೪)ಗೆ ಸಿ.ಎ.ಎಸ್ ಮುಂಬಡ್ತಿ ನೀಡಲು ನಡೆಸಿದ ಆಯ್ಕೆ ಸಮಿತಿ ಸಭೆ ನಡೆವಳಿಗಳ ಅನುಮೋದನೆ ಕುರಿತು.

ಟಿಪ್ಪಣಿ : ಮಾನವಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಎಲ್.ಶ್ರೀನಿವಾಸ, ಹಾಗೂ ಡಾ. ತಾರಿಹಳ್ಳಿ ಹನುಮಂತಪ್ಪ ಇವರ ಸಿ.ಎ.ಎಸ್. ಮುಂಬಡ್ತಿ ಸಂಬಂಧ ದಿನಾಂಕ ೦೭.೦೮.೨೦೨೧ರಂದು ನಡೆದ ಸಹ ಪ್ರಾಧ್ಯಾಪಕರ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆ(ಹಂತ ೧೩ಎ ರಿಂದ ೧೪)ಗೆ ಸಿ.ಎ.ಎಸ್ ಮುಂಬಡ್ತಿ ಆಯ್ಕೆ ಸಮಿತಿ ಸಭೆ ನಡೆವಳಿಯನ್ನು ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ : ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೮.೨೦ ದಿನಾಂಕ ೧೯.೦೮.೨೦೨೧ರಂದು ಸಹ ಪ್ರಾಧ್ಯಾಪಕರ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆ(ಹಂತ ೧೩ಎ ರಿಂದ ೧೪)ಗೆ ಸಿ.ಎ.ಎಸ್ ಮುಂಬಡ್ತಿ ನೀಡಲು ನಡೆಸಿದ ಆಯ್ಕೆ ಸಮಿತಿ ಸಭೆ ನಡೆವಳಿಗಳ ಅನುಮೋದನೆ ಕುರಿತು.

ಟಿಪ್ಪಣಿ : ಅಭಿವೃದ್ಧಿ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಜನಾರ್ದನ ಅವರ ಸಿ.ಎ.ಎಸ್. ಮುಂಬಡ್ತಿ ಸಂಬಂಧ ದಿನಾಂಕ ೧೯.೦೮.೨೦೨೧ರಂದು ನಡೆದ ಸಹ ಪ್ರಾಧ್ಯಾಪಕರ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆ(ಹಂತ ೧೩ಎ ರಿಂದ ೧೪)ಗೆ ಸಿ.ಎ.ಎಸ್ ಮುಂಬಡ್ತಿ ಆಯ್ಕೆ ಸಮಿತಿ ಸಭೆ ನಡೆವಳಿಯನ್ನು ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ : ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೮.೨೧ ದಿನಾಂಕ ೧೮.೦೯.೨೦೨೧ರಂದು ಸಹ ಪ್ರಾಧ್ಯಾಪಕರ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆ(ಹಂತ ೧೩ಎ ರಿಂದ ೧೪)ಗೆ ಸಿ.ಎ.ಎಸ್ ಮುಂಬಡ್ತಿ ನೀಡಲು ನಡೆಸಿದ ಆಯ್ಕೆ ಸಮಿತಿ ಸಭೆ ನಡೆವಳಿಗಳ ಅನುಮೋದನೆ ಕುರಿತು.

ಟಿಪ್ಪಣಿ : ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಎಸ್.ವೈ. ಸೋಮಶೇಖರ್ ಅವರ ಸಿ.ಎ.ಎಸ್. ಮುಂಬಡ್ತಿ ಸಂಬಂಧ ದಿನಾಂಕ ೧೮.೦೯.೨೦೨೧ರಂದು ನಡೆದ ಸಹ ಪ್ರಾಧ್ಯಾಪಕರ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆ(ಹಂತ ೧೩ಎ ರಿಂದ ೧೪)ಗೆ ಸಿ.ಎ.ಎಸ್ ಮುಂಬಡ್ತಿ ಆಯ್ಕೆ ಸಮಿತಿ ಸಭೆ ನಡೆವಳಿಯನ್ನು ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ : ೧. ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.
೨. ಭಾಷಾನಿಕಾಯದ ಸಹ ಪ್ರಾಧ್ಯಾಪಕರ ಸಿ.ಎ.ಎಸ್.ಮುಂಬಡ್ತಿ ಸಂಬಂಧ ಸೂಕ್ತ ಕ್ರಮವಹಿಸಲು ಸಭೆಯು ತೀರ್ಮಾನಿಸಿತು.

೨೦೮.೨೨ ಕನ್ನಡ ವಿಶ್ವವಿದ್ಯಾಲಯದ ಹಲವು ಬೋಧಕೇತರ ಸಿಬ್ಬಂದಿಗಳು ದಿನಾಂಕ ೧೩.೦೮.೨೦೨೧ರ ಪತ್ರದ ಮೂಲಕ ಹಿರಿಯ ಸಹಾಯಕರ ಹುದ್ದೆಗೆ ಮುಂಬಡ್ತಿ ಕೋರಿ ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸೇವಾವಧಿ ಪೂರೈಸಿ ಮುಂಬಡ್ತಿಗೆ ಅರ್ಹವಾಗುವ ಬೋಧಕೇತರ ಸಿಬ್ಬಂದಿಗಳ ಸಂಪೂರ್ಣ ವಿವರಗಳನ್ನು ಮುಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಿತು.

೨೦೮.೨೩ ಡಾ. ಮಾಧವ ಪೆರಾಜೆ, ಪ್ರಾಧ್ಯಾಪಕರು/ಡೀನ್ ವಿಜ್ಞಾನ ನಿಕಾಯ, ಇವರು ವಿಶ್ವವಿದ್ಯಾಲಯ ಕಾಲೇಜುಗಳನ್ನು (Constituent Colleges) ಹೊಂದುವ ಅವಕಾಶವನ್ನು ಕಲ್ಪಿಸಲು ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮಕ್ಕೆ ಅವಶ್ಯ ತಿದ್ದುಪಡಿ ಮಾಡುವ ಮತ್ತು ಕನ್ನಡ ವಿಶ್ವವಿದ್ಯಾಲಯದ ಅಧ್ಯಯನ ವಿಭಾಗಗಳಲ್ಲಿ ಎನ್.ಇ.ಪಿ–೨೦ರ ಅನ್ವಯ ಸ್ನಾತಕ ಪದವಿ ತರಗತಿಗಳನ್ನು ತೆರೆಯುವ ಸಂಬಂಧ ಸಲ್ಲಿಸಿರುವ ಪ್ರಸ್ತಾವದ ಕುರಿತು.

ನಿರ್ಣಯ : ಡಾ. ಮಾಧವ ಪೆರಾಜೆ, ಡೀನ್ ವಿಜ್ಞಾನ ನಿಕಾಯ ಅವರು ದಿನಾಂಕ. ೧೭.೦೯.೨೦೨೧ರಂದು ಮಾನ್ಯ ಕುಲಪತಿಗಳಿಗೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಸಭೆಯ ಮುಂದೆ ಮಂಡಿಸಿದರು. ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ಈ ಕೆಳಗಿನಂತೆ ನಿರ್ಣಯವನ್ನು ಕೈಗೊಂಡಿತು.

೧. ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕರ ವಿಶ್ವಾಸವನ್ನು ಪಡೆದು ವಿಶ್ವವಿದ್ಯಾಲಯ ಕಾಲೇಜುಗಳನ್ನು ಹೊಂದಲು ಮತ್ತು ಅದಕ್ಕಾಗಿ ಅಧಿನಿಯಮಕ್ಕೆ ಅವಶ್ಯ ತಿದ್ದುಪಡಿಮಾಡಲು ಅನುಮತಿ ನೀಡಲಾಯಿತು.

೨. ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರಗಳ ವ್ಯಾಪ್ತಿಯಲ್ಲಿರುವ ಶಿಕ್ಷಣ ಸಂಸ್ಥೆಗಳು ಅಪೇಕ್ಷೆಪಟ್ಟಲ್ಲಿ ಅವುಗಳಿಗೆ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಕೋರ್ಸ್‌ಗಳನ್ನು ನಡೆಸಲು ವಿಶ್ವವಿದ್ಯಾಲಯದಿಂದ ಮಾನ್ಯತೆ ನೀಡಲು ಅವಕಾಶ ಕಲ್ಪಿಸುವುದು.

೩. ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ-೨೦೨೦ರ ಅನ್ವಯ ಸ್ನಾತಕ (Under Graduate degrees) ಪದವಿ ತರಗತಿಗಳನ್ನು ಆರಂಭಿಸಲು ಸಭೆ ಅನುಮೋದನೆ ನೀಡಿತು.

೪. ಈಗಾಗಲೇ ರಚಿಸಲಾಗಿರುವ ಎನ್.ಇ.ಪಿ-೨೦೨೦ರ ಕಾರ್ಯಪಡೆಯು ಇದರ ಜವಾಬ್ದಾರಿಯನ್ನು ನಿರ್ವಹಿಸಬೇಕೆಂದು ಸಭೆ ತೀರ್ಮಾನಿಸಿತು.

೨೦೮.೨೪ ಕಾರ್ಯನಿರತ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆ, ನಿಷೇಧ, ನಿವಾರಣೆ ಘಟಕಕ್ಕೆ ಬುಡಕಟ್ಟು ಅಧ್ಯಯನ ವಿಭಾಗದ ಪಿಎಚ್.ಡಿ. ವಿದ್ಯಾರ್ಥಿನಿಯಾದ ಕು. ಹೇಮಾವತಿ ಬಿ.ಹೆಚ್. ಇವರು ನೀಡಿರುವ ದೂರಿನ ಕುರಿತು ದಿನಾಂಕ ೨೦.೦೨.೨೦೨೧ರಂದು (ಸಮಿತಿಯ ಸಭೆ-೪) ಸಭೆ ನಡೆಸಿ ನಿರ್ಣಯಗಳನ್ನು ಕೈಗೊಂಡಿದ್ದು, ಸದರಿ ನಿರ್ಣಯಗಳನ್ನು ಅನುಷ್ಠಾನಗೊಳಿಸಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಈ ಅಂಶಗಳನ್ನು ಸಭೆಯು ಪರಿಶೀಲಿಸಿ, ಸದರಿ ಸಮಿತಿಯ ಸಭೆ-೪ರ ನಿರ್ಣಯಗಳನ್ನು ಅನುಷ್ಠಾನಗೊಳಿಸಲು ಸಭೆಯು ಅನುಮೋದನೆ ನೀಡಿತು.

೨೦೮.೨೫ ಕನ್ನಡ ವಿಶ್ವವಿದ್ಯಾಲಯದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರವು ನಡೆಸುವ ದ್ವಿತೀಯ ಕಲಾ ಮೂಲವನ್ನು ಪಿ.ಯು.ಸಿ.ಗೆ ತತ್ಸಮಾನವೆಂದು ಪರಿಗಣಿಸಿ ಪ್ರಥಮ ವರ್ಷದ ಬಿ.ವಿ.ಎ. ಫೌಂಡೇಷನ್ ಕೋರ್ಸ್‌ಗೆ ಪ್ರವೇಶ ಕಲ್ಪಿಸುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಪತ್ರ ಸಂಖ್ಯೆ: ಇ-ಕಛೇರಿ ಸಂಖ್ಯೆ:ಇಡಿ:೭೯/ ಯುಆರ್‌ಸಿ/೨೦೨೧, ದಿನಾಂಕ: ೧೬-೦೯-೨೦೨೧ರ ಮೂಲಕ ನಿರ್ದೇಶನವನ್ನು ನೀಡಿರುತ್ತಾರೆ. ಸದರಿ ಪತ್ರದ ಹಿನ್ನೆಲೆಯಂತೆ ಕ್ರಮಕ್ಕೆಗೊಳ್ಳಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿ.

ನಿರ್ಣಯ : ಈ ಕುರಿತು ಸಭೆಯು ಪರಿಶೀಲಿಸಿ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರವು ನಡೆಸುವ ದ್ವಿತೀಯ ಕಲಾಮೂಲವನ್ನು ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ ಇಲಾಖೆ) ಪತ್ರ ಸಂಖ್ಯೆ: ಇ-ಕಛೇರಿ ಸಂಖ್ಯೆ:ಇಡಿ:೭೯/ ಯುಆರ್‌ಸಿ/ ೨೦೨೧, ದಿನಾಂಕ: ೧೬-೦೯-೨೦೨೧ರ ನಿರ್ದೇಶನದಂತೆ ಪಿ.ಯು.ಸಿ.ಗೆ ತತ್ಸಮಾನವೆಂದು ಪರಿಗಣಿಸಿ, ಪ್ರಥಮ ವರ್ಷದ ಬಿ.ವಿ.ಎ. ಫೌಂಡೇಷನ್ ಕೋರ್ಸ್‌ಗೆ ಪ್ರವೇಶ ಕಲ್ಪಿಸಲು ಸಭೆ ಅನುಮೋದನೆ ನೀಡಿತು.

೨೦೮.೨೬ ಕನ್ನಡ ವಿಶ್ವವಿದ್ಯಾಲಯದ ೩೦ನೇ ನುಡಿಹಬ್ಬದ ಪ್ರಕ್ರಿಯೆಗಳನ್ನು ಆರಂಭಿಸುವ ಕುರಿತು.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ೩೦ನೇ ನುಡಿಹಬ್ಬದ ಪ್ರಕ್ರಿಯೆಗಳಿಗೆ ಸಂಬಂಧಪಟ್ಟಂತೆ ಸಭೆಯು ಪರಿಶೀಲಿಸಿ ಕೆಳಕಂಡ ನಿರ್ಣಯಗಳನ್ನು ಕೈಗೊಂಡಿತು.

೧. ೩೦ನೇ ನುಡಿಹಬ್ಬದ ಘಟಿಕೋತ್ಸವವನ್ನು ನಡೆಸಲು ಘನತೆವೆತ್ತ ರಾಜ್ಯಪಾಲರ ದಿನಾಂಕವನ್ನು ಕೋರಿ ಪತ್ರ ಬರೆಯುವುದು. ದಿನಾಂಕ ನಿಗದಿಪಡಿಸುವ ಸಂದರ್ಭದಲ್ಲಿ ನವೆಂಬರ್ ಅಥವಾ ಡಿಸೆಂಬರ್ ತಿಂಗಳಲ್ಲಿ ಬರುವ ಹುಣ್ಣಿಮೆ ದಿನಗಳಿಗೆ ಆದ್ಯತೆ ನೀಡುವುದು.

೨. ೩೦ನೇ ನುಡಿಹಬ್ಬದ ಘಟಿಕೋತ್ಸವ ಭಾಷಣಕಾರನ್ನಾಗಿ(ಮುಖ್ಯಅತಿಥಿ) ಡಾ.ಎಂ.ಕೆ.ಶ್ರೀಧರ, ಡಾ.ತೇಜಸ್ವಿ ಕಟ್ಟೀಮನಿ ಹಾಗೂ ಶ್ರೀಮತಿ ಸುಧಾಮೂರ್ತಿ ಇವರುಗಳಲ್ಲಿ ಒಬ್ಬರನ್ನು ಆಯ್ಕೆ ಮಾಡುವಂತೆ ಘನತೆವೆತ್ತ ಕುಲಾಧಿಪತಿಗಳನ್ನು ಕೋರಲು ನಿರ್ಣಯಿಸಿತು.

೩. ೩೦ನೇ ನುಡಿಹಬ್ಬದ ನಾಡೋಜ ಆಯ್ಕೆ ಸಮಿತಿಗೆ ಡಾ. ಹೇಮಂತ ಕುಮಾರ್, ಡಾ. ಶಿವಲಿಂಗಯ್ಯ ಹಾಗೂ ಡಾ.ಎಸ್.ಎ.ಕೋರಿ ಇವರುಗಳಲ್ಲಿ ಒಬ್ಬರನ್ನು ವಿಶ್ವವಿದ್ಯಾಲಯದ ಪ್ರತಿನಿಧಿ/ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲು ಸಭೆ ಅನುಮೋದನೆ ನೀಡಿತು.

೨೦೮.೨೭ ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಕಾರ್ಯಚಟುವಟಿಕೆಗಳನ್ನು ಕುರಿತು.

ನಿರ್ಣಯ : ಸದರಿ ವಿಷಯವನ್ನು ಕುರಿತು ಸಭೆಯು ಚರ್ಚಿಸಿ ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲು ಅನುಮೋದನೆ ನೀಡಿತು.

೧. ವಿಶ್ವವಿದ್ಯಾಲಯದ ಎಲ್ಲಾ ಅಧ್ಯಯನ ವಿಭಾಗ ಹಾಗೂ ಆಡಳಿತ ವಿಭಾಗಗಳ ಸಿಬ್ಬಂದಿಗಳು ಕರ್ತವ್ಯ ಲೋಪವೆಸಗದೆ, ಪ್ರತಿದಿನ ತಮ್ಮ ವಿಭಾಗ, ಕಚೇರಿಗಳಿಗೆ ಹಾಜರಾಗಿ ಕೆಲಸ ನಿರ್ವಹಿಸುವ ನಿಟ್ಟಿನಲ್ಲಿ ನಿಯಮಾನುಸಾರ ಕ್ರಮವಹಿಸುವುದು.

೨. ವಿಶ್ವವಿದ್ಯಾಲಯದ ಎಲ್ಲಾ ಸಿಬ್ಬಂದಿಗಳಿಗೆ ಬಯೋಮೆಟ್ರಿಕ್ ಕಡ್ಡಾಯಗೊಳಿಸುವುದು ಹಾಗೂ ಎಲ್ಲಾ ವಿಭಾಗಗಳು ಚಲನ–ವಲನ ರಿಜಿಸ್ಟ್ರನ್ನು ನಿರ್ವಹಿಸುವುದು.

೨೦೮.೨೮ ಬೆಂಗಳೂರಿನಲ್ಲಿ ವಿಶ್ವವಿದ್ಯಾಲಯಕ್ಕೆ ಮಂಜೂರಾದ ಜಮೀನುಗಳನ್ನು ಅಭಿವೃದ್ಧಿ ಪಡಿಸುವ ಬಗೆಗೆ.

ನಿರ್ಣಯ : ಸದರಿ ವಿಷಯವನ್ನು ಕುರಿತು ಸಭೆಯು ಚರ್ಚಿಸಿ ಡಾ.ರಾಜಕುಮಾರ್ ಅಧ್ಯಯನ ಕೇಂದ್ರ ಹಾಗೂ ಇದರ ಕಟ್ಟಡ ನಿರ್ಮಾಣಕ್ಕೆ ಮಂಜೂರಾದ ಜಮೀನಿನಲ್ಲಿ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ಯೋಜನೆಯನ್ನು ಸಿದ್ಧಪಡಿಸಿ, ತ್ವರಿತವಾಗಿ ಕಾರ್ಯಗತಗೊಳಿಸಲು ಸೂಕ್ತ ಕ್ರಮವಹಿಸಬೇಕೆಂದು ತೀರ್ಮಾನಿಸಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು